ಕರ್ನಾಟಕ ವಿಧಾನ ಸಭೆ

ಶುಕ್ರವಾರ 27ನೇ ಮಾರ್ಚಿ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ. ಬೆಳಿಗ್ಗೆ 10.25 ಕ್ಕೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ.ಸಿ.ಕೇಶವಮೂರ್ತಿ ಅವರು ಪೀಠವನ್ನು ಅಲಂಕರಿಸಿದ್ದರು]

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಉಪಾಧ್ಯಕ್ಷಿಣಿಯವರು:- ಶ್ರೀ ಬಾಬುರಾವ್ ಚೌಹಾನ್‌ರವರೆ ನಿಮ್ಮ ಪ್ರಶ್ನೆಗೆ ಮಂತ್ರಿಗಳು 15 ದಿನ ಟೈಮ್ ಕೇಳಿದ್ದಾರೆ. ಆದ್ದರಿಂದ ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಬಾಬುರಾವ್ ಚೌಹಾನ್:- ಇದು ಬಹಳ ಮುಖ್ಯವಾದ ಪ್ರಶ್ನೆ ಇತ್ತು. ಇದು ಹುಡುಗರ ಅಡ್ಮಿಷನ್ ಗೋಸ್ಕರ ಈ ಪ್ರಶ್ನೆ ಇತ್ತು.

ಉಪಾಧ್ಯಕ್ಷಿಣಿಯವರು:- ಅವರು 15 ದಿವಸ ಟೈಮ್ ಕೇಳಿದ್ದಾರೆ. ಉತ್ತರವೇ ಇಟ್ಟಿಲ್ಲ, ತಾವು ಪ್ರಶ್ನೆ ಹೇಗೆ ಕೇಳುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಬಾಬುರಾವ್ ಚೌಹಾನ್:- ಇನ್ನು 15 ದಿವಸ ಆದಮೇಲೆ ಅಸೆಂಬ್ಲಿ ಇರುವುದಿಲ್ಲ. ಉತ್ತರವನ್ನು ಕಳುಹಿಸಿಕೊಡುತ್ತಾರೋ ಏನೋ?

ಉಪಾಧ್ಯಕ್ಷಿಣಿಯವರು:- ಉತ್ತರ ಕಳುಹಿಸಿಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ:- ಕಳುಹಿಸಿಕೊಡುತ್ತೇನೆ.

ಶ್ರೀ ಬಾಬುರಾವ್ ಚೌಹಾನ್:- ಎಷ್ಟು ದಿವಸದಲ್ಲಿ ಕಳುಹಿಸಿಕೊಡುತ್ತಾರೆ?

ಉಪಾಧ್ಯಕ್ಷಿಣಿಯವರು:- ಉತ್ತರ ಬರುತ್ತಿದ್ದ ಹಾಗೆ ಕಳುಹಿಸಿಕೊಡುತ್ತಾರೆ.

ವಿಷಯ:- ರಾಜ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ದಾದಿಯರ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 463 (2340)

ಶ್ರೀ ಕೆ.ಕುಶಾಲ್ (ಸೂಳ್ಯ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ 1991ಕ್ಕಿಂತ ಮೊದಲು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಟಾಫ್ ನರ್ಸ್‌ಗಳ ಹುದ್ದೆಗೆ ನೇಮಕ ಮಾಡಿಕೊಳ್ಳಲು ಇದ್ದ ನೇಮಕಾತಿಯ ವಿಧಾನವೇನು?

ಆ 1991ರ ನಂತರ ನೇಮಕಾತಿ ವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಲಾಗಿದೆಯೇ?

ಇ ಈ ಬದಲಾವಣೆಯು ರಾಜ್ಯದ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನಾನುಕೂಲವುಂಟು ಮಾಡುವುದೇ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಶೇ.25 ರಷ್ಟು ನರ್ಸಿಂಗ್ ಪದವೀಧರರಿಂದ ಶೇ.75 ರಷ್ಟು ಎಸ್.ಎಸ್.ಎಲ್.ಸಿ.ಯೊಂದಿಗೆ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫ್‌ರಿ ಪ್ರಮಾಣ ಪತ್ರ ಹೊಂದಿದವರಿಂದ.

ಆ ಇಲ್ಲ.

ಇ ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಕೇಳಿದ 'ಅ' ಪ್ರಶ್ನೆಗೆ ಮಾನ್ಯ ಮಂತ್ರಿಗಳು ಶೇಕಡ 25ರಷ್ಟು ನರ್ಸಿಂಗ್ ಪದವೀಧರರಿಂದ ಶೇಕಡ 75ರಷ್ಟು ಎಸ್.ಎಸ್.ಎಲ್.ಸಿ ಯೊಂದಿಗೆ ನರ್ಸಿಂಗ್ ಮತ್ತು ಮಿಡ್‌ವೈಫರಿ ಪ್ರಮಾಣ ಪತ್ರ ಹೊಂದಿದವರನ್ನು ಭರ್ತಿ ಮಾಡಲಾಗುತ್ತದೆಂದು ಹೇಳುತ್ತಿದ್ದಾರೆ. ನಂತರ